# ಪ್ರಾದೇಶಿಕ ಪ್ರಾಕೃತಿಕ ಇತಿಹಾಸ ಸಂಗ್ರಹಾಲಯ ಮೈಸೂರು

(ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ)

CELEBRATING 25 YEARS 1995 - 2020

**ಹಸಿರು ಹಾಗೂ ಸ್ವಚ್ಛ ಪರಿಸರಕ್ಕಾಗಿ ...**
**ಬನ್ನಿ ಬದಲಾವಣೆಯಲ್ಲಿ ಪಾಲ್ಗೊಳ್ಳೋಣ...**

www.nmnh.nic.in













## ಶೈಕ್ಷಣಿಕ ಚಟುವಟಿಕೆಗಳು :

ಮೈಸೂರಿನ ಪ್ರಾದೇಶಿಕ ಪ್ರಾಕೃತಿಕ ಇತಿಹಾಸ ಸಂಗ್ರಹಾಲಯವು ಇಡೀ ದಕ್ಷಿಣ ಭಾರತದಾದ್ಯಂತ ಶೈಕ್ಷಣಿಕ ಜಲವನ್ನು ಹೊಂದಿದೆ. ಕೇಂದ್ರ ಸ್ಥಾನದಲ್ಲಿ, ದೈನಂದಿನ ಮಾರ್ಗದರ್ಶಿ ವೀಕ್ಷಣೆ, ಚಲನಚಿತ್ರ ಪ್ರದರ್ಶನ, ಶೈಕ್ಷಣಿಕ ಸ್ಪರ್ಧೆಗಳ, ಮಕ್ಕಳಿಗೆ ನಿಸರ್ಗ ಶಿಕ್ಷಣ ಶಿಬಿರಗಳು, ವಿಶೇಷ ಚೇತನರಿಗೆ ವಿಶೇಷ ಕಾರ್ಯಕ್ರಮಗಳು, ಸೃಜನಾತ್ಮಕ ಚಟುವಟಿಕೆಗಳನ್ನು ಏರ್ಪಡಿಸುವುದಲ್ಲದೇ, ಅನೌಪಚಾರಿಕ ಶಿಕ್ಷಕ ತರಬೇತಿ, ಪುನಶ್ಚೇತನ ಶಿಬಿರಗಳು ಮೊದಲಾಗಿ ಬಿಡುವಿಲ್ಲದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

## ಅಲ್ಪಾವಧಿ ಪ್ರದರ್ಶನ ಕೊಠಡಿ :

ಬದಲಾವಣೆ ನಿರಂತರ... ಸಮಕಾಲೀನ –ಪಾರಿಸರಿಕ –ಜೈವಿಕ ವಿಷಯಗಳ ಬಗ್ಗೆ ಇಲ್ಲಿ ವಸ್ತು –ಛಾಯಾಚಿತ್ರ –ಬರಹಗಳನ್ನೊಳಗೊಂಡ ಅಲ್ಪ ಅವಧಿಯ ಪ್ರದರ್ಶನಗಳನ್ನು ಆಗಾಗ್ಗೆ ಏರ್ಪಡಿಸಲಾಗುತ್ತಿರುತ್ತದೆ.

## ಹೊರಾವರಣ :

ಸುಮಾರು ಐದು ಎಕರೆಗಳಲ್ಲಿ ಹರಡಿಕೊಂಡಿರುವ, ಕಡುಹಸಿರು ಉದ್ಯಾನದಲ್ಲಿ ಸ್ಪರ್ಶಿಸು, ಅನುಭವಿಸು ಮತ್ತು ಗ್ರಹಿಸು ಸಸ್ಯ ಸಂಪನ್ಮೂಲ ಕೇಂದ್ರ ಶಿಲ್ಪ ವನ, ನಕ್ಷತ್ರ ವನ, ರಾಶಿ ವನ ಮೊದಲಾದ ಅನೇಕ ವಿಭಾಗಗಳನ್ನು ಹೊಂದಿದ್ದು, ಪಕ್ಕದಲ್ಲೇ ಇರುವ ಕಾರಂಜಿ ಕೆರೆಗೆ ಬರುವ ಪಕ್ಷಿಗಳನ್ನೂ ನೋಡಬಹುದು.

**ಸಂಗ್ರಹಾಲಯದ ಸಮಯ:**
ಪ್ರತಿದಿನ ಬೆಳಿಗ್ಗೆ 10:00 ರಿಂದ ಸಂಜೆ 06:00 ರವರೆಗೆ
(ಪ್ರತಿ ಸೋಮವಾರ ಹಾಗೂ ರಾಷ್ಟ್ರೀಯ ರಜಾದಿನಗಳಂದು ರಜೆ)

**ಪ್ರವೇಶ ಉಚಿತ**

**ಪ್ರಾದೇಶಿಕ ಪ್ರಾಕೃತಿಕ ಇತಿಹಾಸ ಸಂಗ್ರಹಾಲಯ, ಮೈಸೂರು**
ರಾಷ್ಟ್ರೀಯ ಪ್ರಾಕೃತಿಕ ಇತಿಹಾಸ ಸಂಗ್ರಹಾಲಯ ನವದೆಹಲಿಯ ಪ್ರಪ್ರಥಮ ಪ್ರಾದೇಶಿಕ ಕೇಂದ್ರ
(ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ)
ಸಿದ್ಧಾರ್ಥ ನಗರ, ಮೈಸೂರು 570 011, ದೂರವಾಣಿ : 0821 2447046

ಜಗತ್ತಿನ ವಿಸ್ತೀರ್ಣದಲ್ಲಿ 2.4% ರಷ್ಟಿದ್ದರೂ, ಜೈವಿಕ ವೈವಿಧ್ಯದಲ್ಲಿ 8% ಪಾಲು ಹೊಂದಿರುವ, ನೂರಾರು ವರ್ಷಗಳಿಂದ ಅನೇಕ ಸಂಸ್ಕೃತಿ ನಾಗರಿಕತೆಗಳೊಂದಿಗೆ ಬೆಳೆದು ಅನುಪಮವಾದ ಮಹಾ ಜೀವ ವೈವಿಧ್ಯವನ್ನು ಹೊಂದಿ ಬದುಕಿ ಬಾಳುತ್ತಿರುವ ದೇಶ ಭಾರತ.

ಕಾಲಾಂತರದಲ್ಲಿ ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ನಿರ್ವಹಣೆಗಾಗಿ ಲಭ್ಯವಿರುವ ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯಿಂದ ಎದುರಾದ ಸಮಸ್ಯೆಗಳನ್ನು ಎದುರಿಸಲು ಭಾರತ ಸರ್ಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದಿತು, ಅವುಗಳಲ್ಲಿ ಒಂದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಅಧೀನದಲ್ಲಿ ಇಡೀ ಭಾರತ ಭೂಖಂಡದ ಪಾರಿಸಾರಿಕ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಅನೌಪಚಾರಿಕ ಶಿಕ್ಷಣ ತಂತ್ರಗಳ ಮೂಲಕ ಜನತೆಯನ್ನು ತಲುಪಿ, ಅವರಲ್ಲಿ ಪರಿಸರ ರಕ್ಷಣೆಯ ಪ್ರಜ್ಞೆಯವನ್ನು ಕಾರ್ಯತಃ ಮೂಡಿಸುವ ಉದ್ದೇಶದಿಂದ ರಾಷ್ಟ್ರೀಯ ಪ್ರಾಕೃತಿಕ ಇತಿಹಾಸ ಸಂಗ್ರಹಾಲಯ, ನವದೆಹಲಿಯ ಸ್ಥಾಪನೆ.

1995ರಲ್ಲಿ ದಕ್ಷಿಣ ಭಾರತದ ಮೈಸೂರಿನಲ್ಲಿ ತನ್ನ ಪ್ರಪ್ರಥಮ ಪ್ರಾದೇಶಿಕ ಕೇಂದ್ರವನ್ನು ತೆರೆದ ಈ ಸಂಸ್ಥೆಯು ಇಂದು ಭೋಪಾಲ, ಭುವನೇಶ್ವರ, ಸವಾಯ್ ಮಾಧೋಪುರ ಹಾಗೂ ಗ್ಯಾಂಗ್ಟೊಕ್‌ಗಳಲ್ಲಿ ತನ್ನ ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ.





ಯಾವುದೇ ಸಂಗ್ರಹಾಲಯಗಳಲ್ಲಿ ಪ್ರದರ್ಶಕಗಳು ಹಾಗೂ ಪ್ರದರ್ಶಕಾಂಗಣಗಳು ಬಲು ನಿರ್ಣಾಯಕ ಪಾತ್ರ ವಹಿಸುತ್ತವೆ. ಮೈಸೂರಿನ ಕೇಂದ್ರವು ಒಂದು ಅಲ್ಪಾವಧಿ ಪ್ರದರ್ಶನ ಕೊಠಡಿ, ಮೂರು ಬೃಹತ್ ಖಾಯಂ ಪ್ರದರ್ಶನಾಂಕಣಗಳು, ಅನ್ವೇಷಣಾ ಕೇಂದ್ರ ಹಾಗೂ ಚಲನಚಿತ್ರ ಪ್ರದರ್ಶನ ಹಾಗೂ ಸಭೆಗಳಿಗಾಗಿ ಸಭಾಂಗಣವನ್ನು ಹೊಂದಿದೆ, ಅಲ್ಲದೆ ಹೊರಾವರಣದಲ್ಲಿ ಸುಂದರ ಉದ್ಯಾನವೂ ಇದೆ.

## ಅಂಕಣ – 1 : ಜೈವಿಕ ವೈವಿಧ್ಯ

ಐಯುಸಿಎನ್ ಸಂಸ್ಥೆಯಿಂದ, ಜಗತ್ತಿನಲ್ಲಿ ಬಹು ಮುಖ್ಯವಾದ ಹಾಗೂ ಸೂಕ್ಷ್ಮವಾದ ಜೈವಿಕ ತಾಣವೆಂದು ಗುರುತಿಸಲ್ಪಟ್ಟಿರುವ ಪಶ್ಚಿಮ ಘಟ್ಟಗಳು ಈ ಅಂಕಣದ ಕೇಂದ್ರ ಬಿಂದು, ಪಶ್ಚಿಮ ಘಟ್ಟಗಳ ಹೊಸ್ತಿಲಿನಲ್ಲಿರುವ ಮೈಸೂರು ಪ್ರದೇಶದ ಸುತ್ತು ಮುತ್ತಲಿನ ವಿಶೇಷ ಪರಿಸರಗಳಾದ ಮಳೆಕಾಡು, ಜೌಗುಭೂಮಿಗಳು,
ಕಂಡ್ಲಾ ಕಾಡುಗಳು, ಸಾಗರಿಕ ಜೀವ ಆವಾಸಗಳಿಗೆ ಹೊಂದಿಕೊಂಡಿರುವ ಸಸ್ಯ-ಜೀವ ಸಂಕುಲಗಳ ಅವಿನಾಭವ ಸಂಬಂಧಗಳನ್ನು ಪ್ರದರ್ಶಿಕೆಗಳ ಮೂಲಕ ವಿವರಿಸಲಾಗಿದೆ.

## ಅನ್ವೇಷಣಾ ಕೇಂದ್ರ

ಇದು ವಿಶೇಷವಾಗಿ, ಮಕ್ಕಳಿಗೆ ಹಾಗೂ ವಿಶೇಷ ಚೇತನರಿಗೆ ವಸ್ತುಗಳನ್ನು ಕೈಯಿಂದ ಮುಟ್ಟಿನೋಡಲು, ಪರೀಕ್ಷಿಸಲು ಹೆಚ್ಚು ಅವಕಾಶ ಕಲ್ಪಿಸಲಾಗಿದೆ. ಪುಟಾಣಿ ವಿಜ್ಞಾನಿ ಚಟುವಟಿಕೆಗಳಿಗೆಂದು ತೂಕದ ಯಂತ್ರ, ಅಳತೆಕಂಬ, ಮರಳುತೊಟ್ಟಿ ಮೊದಲಾದ ಸೌಕರ್ಯಗಳಲ್ಲದೆ, 30 ಅಡಿ ಉದ್ದದ ನೀಲಿ ತಿಮಿಂಗಿಲದ ಅಸ್ಥಿಪಂಜರವೂ ಕೂಡ ಚಟುವಟಿಕೆಯ –ಆಕರ್ಷಣೆಯ ಕೇಂದ್ರವಾಗಿದೆ....







## ಅಂಕಣ – 2 :
## ಕಾಲದ ಪಯಣದಲ್ಲಿ ಜೀವ ವಿಕಾಸ

ಭೂಮಿಯ ಹುಟ್ಟಿನಿಂದ ಇಂದಿನವರೆಗಿನ ಜೈವಿಕ ಉನ್ನತಿ-ಅವನತಿಗಳನ್ನು ವಿಕಾಸದ ಬಹುಮುಖ್ಯ ಕಾಲ ಘಟ್ಟಗಳನ್ನು ಅತ್ಯಂತ ಸರಳವಾಗಿ, ಡೈನೋಸಾರ್, ಉರಗಗಳ, ಪಕ್ಷಿಗಳ, ಸಸ್ತನಿಗಳ ವಿಕಾಸ ಮೊದಳಾದವನ್ನು ಈ ಸುರಂಗ ಮಾರ್ಗದ ಅಂಕಣದಲ್ಲಿ, ವಿವಿಧ ಪ್ರದರ್ಶಿಕೆಗಳ ಮೂಲಕ ಅರಿಯಬಹುದಗಿದೆ.

## ಅಂಕಣ – 3 : ಪರಿಸರ

ಬಲು ಸೂಕ್ಷ್ಮವಾದ ಜೈವಿಕ –ಪ್ರಾಕೃತಿಕ ಜಲವನ್ನು ವಿವರಿಸುವ ಅಂಕಣ. ವಿವಿಧ ಪರಿಸರಿಕ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರುವ ಮಾನವ ಪಂಗಡಗಳು ಹೇಗೆ ಪರಿಸರವನ್ನು ಜೀವಿಕೆಗೆ ಬಳಸಿಕೊಂಡರೂ, ಅದಕ್ಕೆ ಹಾನಿಯಾಗದ ರೀತಿಯಲ್ಲಿ "ಸಂಪೋಷಿತ ಜೀವನ ನಡೆಸುತ್ತಿರುವುದರ ಅರಿವು ದೊರೆಯುತ್ತದೆ. ನೆಲ, ಜಲ, ಆಕಾಶ, ಪರ್ವತಗಳಲ್ಲಿನ ಜೈವಿಕ ಹೊಂದಾಣಿಕೆ, ಜಲ ಚಕ್ರ, ವಿವಿಧ ರೀತಿಯ ಖನಿಜಗಳ, ರಸಾಯನಿಕ ಚಕ್ರಗಳ ಪ್ರಾಕೃತಿಕ ನಿರ್ವಹಣೆ ವಿವರಿಸುವ ಸರಳ ಪ್ರದರ್ಶಿಕೆಗಳಿವೆ".